
## ಕವಿತೆ



**ಮೂಡ್ನಾಕೂಡು ಚಿನ್ನಸ್ವಾಮಿ**

ಕಲೆ: ರೂಪಶ್ರೀ ಕಲ್ಲಿಗನೂರು

# ಕಲ್ಲಿನ ನ್ಯಾಯ



ವರ್ತಕನೊಬ್ಬ ಹೆಗಲ ಮೇಲೆ
ಐವತ್ತು ಹತ್ತಿ ಪಿಂಡಿಗಳ ಹೊತ್ತು ಮಾರುತ್ತಾ ಇದ್ದ
ಹಾದಿಯಲ್ಲಿ ವಿಶ್ರಮಿಸಲು ಒಂದು ಮಂಟಪದ ಬಳಿ ಹೊರೆಯನ್ನು ಇಳಿಸಿದ
ಅಲ್ಲಿ ಎತ್ತರದ ನಿಲುವಿನ ಬುದ್ಧನ ಕಲ್ಲಿನ ಮೂರ್ತಿಯಿತ್ತು.

ಕೆಲ ನಿಮಿಷಗಳಲ್ಲಿ ವರ್ತಕನಿಗೆ ನಿದ್ದೆ ಹತ್ತಿತು
ಕಣ್ಣು ತೆರೆದಾಗ ಹತ್ತಿ ಪಿಂಡಿಗಳು ಮಾಯವಾಗಿದ್ದವು
ಕೂಡಲೇ ಪೋಲೀಸರಿಗೆ ದೂರು ನೀಡಿದ
ದಿನಗಳು ಕಳೆದವು, ಕಳ್ಳ ಸಿಕ್ಕಲಿಲ್ಲ
ಪೋಲೀಸರು ನ್ಯಾಯಾಲಯಕ್ಕೆ ವರದಿ ನೀಡಿದರು.

ಒವ್ರೊಕಾ ಅನ್ನುವ ನ್ಯಾಯಾಧೀಶನ ಮುಂದೆ
ವಿಚಾರಣೆ ನಡೆಯಿತು, ಆತ ಕಳ್ಳ ಸಿಕ್ಕಲಿಲ್ಲ ಎಂದಮೇಲೆ
ಕಲ್ಲಿನ ಬುದ್ಧನೇ ಮಾಲನ್ನು ಕದ್ದಿದ್ದಾನೆ ಎಂದು ತೀರ್ಪಿತ್ತ
ಜನರ ಕ್ಷೇಮವನ್ನು ನೋಡಿಕೊಳ್ಳಬೇಕಾದ ಬುದ್ಧನೇ
ಈ ಕೆಲಸ ಮಾಡಿದ್ದಾನೆ, ಅವನನ್ನು ಬಂಧಿಸಿ ಎಂದು ಆಜ್ಞೆ ಹೊರಡಿಸಿದ

ಮಂಟಪದಲ್ಲಿದ್ದ ಎತ್ತರದ ಬುದ್ಧನ ಕಲ್ಲಿನ ಮೂರ್ತಿಯನ್ನು
ನ್ಯಾಯಾಲಯಕ್ಕೆ ಸಾಗಿಸಲಾಯಿತು
ಕುತೂಹಲಕ್ಕೆ ನೆರೆದಿದ್ದ ಜನರು ಮುಸಿಮುಸಿ ನಗಲಾರಂಭಿಸಿದರು
ಒವ್ರೊಕಾ ನಗುತ್ತಿದ್ದವರಿಗೆ ಛೀಮಾರಿ ಹಾಕಿದ
ಇದು ನ್ಯಾಯಾಂಗ ನಿಂದನೆ ಎಂದು ಅವರಿಗೂ ಶಿಕ್ಷೆ ವಿಧಿಸಿದ

ಅಲ್ಲಿ ಸೇರಿರುವ ಜನರೆಲ್ಲರೂ ಮೂರು ದಿನದೊಳಗೆ
ಒಂದೊಂದು ಹತ್ತಿ ಪಿಂಡಿಯನ್ನು ತಂದೊಪ್ಪಿಸಬೇಕು